SEPTEMBER 02, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಬೆಳಗ್ಗೆ 9 ಗಂಟೆಗೆ ಮೈಸೂರು ಅರಮನೆಗೆ ಭೇಟಿ ನೀಡಿ, ವಿವಿಧ ಪ್ರಾಂಗಣಗಳನ್ನು ಕುತೂಹಲದಿಂದ ವೀಕ್ಷಿಸಿದರು. ರಾಜವಂಶಸ್ಥೆ, ರಾಜ ಮಾತೆ, ಪ್ರಮೋದಾದೇವಿ ಒಡೆಯರ್ ಅವರು, ರಾಷ್ಟ್ರಪತಿಯವರನ್ನು, ಸಾಂಪ್ರದಾಯಿಕ ಗೌರವಗಳೊಂದಿಗೆ ಬರಮಾಡಿಕೊಂಡು, ಸತ್ಕರಿಸಿದರು. ಅರಮನೆಯಲ್ಲಿ ಉಪಾಹಾರ ಸೇವಿಸಿದ ರಾಷ್ಟ್ರಪತಿಯವರು, ರಾಜವಂಶಸ್ಥರೊಂದಿಗೆ ಸಮಾಲೋಚಿಸಿದರು. ಮೈಸೂರು ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಯವರು, ರಾಷ್ಟ್ರಪತಿಗಳನ್ನು ಬೀಳ್ಕೊಟ್ಟಿದ್ದು, ಭಾರತೀಯ ವಾಯುಸೇನೆಯ ವಿಮಾನದಲ್ಲಿ, ಚೆನ್ನೈಗೆ ಪ್ರಯಾಣ ಬೆಳೆಸಿದ್ದಾರೆ. ಇನ್ನು ಕೆಲವೇ ಕ್ಷಣಗಳಲ್ಲಿ, ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲಿದ್ದಾರೆ.

<><><>

ರಾಷ್ಟ್ರಪತಿಗಳು, ಎರಡು ದಿನ ರಾಜ್ಯಕ್ಕೆ ಭೇಟಿ ನೀಡಿ, ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಮೆರಗು ಹೆಚ್ಚಿಸಿದ್ದು, ಮೈಸೂರಿನ ಇತಿಹಾಸದ ಪುಟಗಳಲ್ಲಿ ದಾಖಲಾಯಿತು.

<><><>

ಕೇಂದ್ರ ಸರ್ಕಾರ, ಜೀವನದ ಅನಿಶ್ಚಿತತೆಗಳ ವಿರುದ್ಧ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು, ಶ್ರೀ ಸಾಮಾನ್ಯರಿಗೆ ಖಚಿತ ಪಡಿಸಲು, 18 ರಿಂದ 50 ವರ್ಷ ವಯಸ್ಸಿನ ವ್ಯಕ್ತಿಗಳಿಗೆ, ವರ್ಷಕ್ಕೆ ಕೇವಲ 436 ರೂಪಾಯಿಯಲ್ಲಿ, 2 ಲಕ್ಷ ರೂಪಾಯಿ ಪರಿಹಾರವನ್ನು, ಪ್ರಧಾನಮಂತ್ರಿ ಜೀವನಜ್ಯೋತಿ ವಿಮೆ ಯೋಜನೆ ಅಡಿ, ಒದಗಿಸುತ್ತಿದೆ.

<><><>

ಹಣಕಾಸು ಸೇರ್ಪಡೆ, ಪರಿಪೂರ್ಣತೆ ಅಭಿಯಾನದ ಭಾಗವಾಗಿ, ಹಾಸನ ಜಿಲ್ಲೆಯ ಹೆತ್ತೂರು, ಕಟ್ಟಿಮಲ್ಲೇನಹಳ್ಳಿ ಸೇರಿದಂತೆ, ಹಲವೆಡೆ ಆಯೋಜಿಸಿದ್ದ, ಜನ ಸುರಕ್ಷಾ ಶಿಬಿರದಲ್ಲಿ, ಪ್ರಧಾನಮಂತ್ರಿ ಜನ–ಧನ ಯೋಜನೆ, ಜೀವನ ಜ್ಯೋತಿ ವಿಮೆ, ಪ್ರಧಾನಮಂತ್ರಿ ಸುರಕ್ಷಾ ವಿಮೆ ಅರ್ಜಿಗಳನ್ನು ಸ್ವೀಕರಿಸಿದ್ದಾಗಿ, ಅಗ್ರಣಿ ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ.

<><><>

ಗ್ರಾಮ ಪಂಚಾಯಿತಿಗಳ, ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿ, ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡಿರುವ ಬಗ್ಗೆ, ಸುಳ್ಳು ಮಾಹಿತಿ, ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವುದು, ರಾಜ್ಯ ಚುನಾವಣಾ ಆಯೋಗದ ಗಮನಕ್ಕೆ ಬಂದಿದೆ. ಆದರೆ ರಾಜ್ಯ ಚುನಾವಣಾ ಆಯೋಗ, ಈ ವರೆಗೂ ಯಾವುದೇ ವೇಳಾಪಟ್ಟಿಯನ್ನು ಪ್ರಕಟಿಸಿಲ್ಲ ಎಂದು, ಆಯೋಗ ಸ್ಪಷ್ಟ ಪಡಿಸಿದೆ.

<><><>

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಸಾರಥ್ಯದಲ್ಲಿ, ಈ ತಿಂಗಳ 7ನೇ ತಾರೀಖಿನ ವರೆಗೆ, ಒಂದು ವಾರ ಕಾಲ, ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ ಆಯೋಜಿತವಾಗಿದೆ. ಅಪೌಷ್ಟಿಕತೆಯನ್ನು ಎದುರಿಸಲು, ಪೌಷ್ಟಿಕಾಂಶ ಸಪ್ತಾಹ

ಆಚರಿಸಲಾಗುತ್ತಿದೆ. ಮಹಿಳಾ ಹಾಗೂ ಮಕ್ಕಳ ಉತ್ತಮ, ಆರೋಗ್ಯಯುತ, ಜೀವನಕ್ಕಾಗಿ, ಪೌಷ್ಟಿಕಾಂಶಯುಕ್ತ ಆಹಾರ ಪದ್ಧತಿಯ, ಮಹತ್ವದ ಬಗ್ಗೆ ಜಾಗೃತಿ ರಾಜ್ಯಾದ್ಯಂತ ಮೂಡಿಸಲಾಗುತ್ತಿದೆ.

<><><>

ಧಾರವಾಡದ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ, ಆಹಾರ ತಜ್ಞೆ ಹಾಗೂ ಹಿರಿಯ ಸಂಶೋಧನಾಧಿಕಾರಿ, ಅರುಣಾ ತಿಮ್ಮಾಪೂರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಅರುಣಾ ತಿಮ್ಮಾಪೂರ ಧ್ವನಿ 40 ಸೆಕೆಂದುಗಳು

<><><>

ಇಂದಿನಿಂದ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬರಲಿದೆ. ಜಿ.ಬಿ.ಎ. ಅಡಿಯಲ್ಲಿ, ಬೆಂಗಳೂರು ಕೇಂದ್ರ, ಬೆಂಗಳೂರು ಪೂರ್ವ, ಬೆಂಗಳೂರು ಪಶ್ಚಿಮ ಹಾಗೂ ಬೆಂಗಳೂರು ದಕ್ಷಿಣ ಎಂದು, 5 ನಗರ ಪಾಲಿಕೆಗಳನ್ನು ರಚಿಸಲಾಗಿದೆ ಎಂದು, ಬೆಂಗಳೂರು ನಗರ ಜಿಲ್ಲೆ ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಜನಸಂಖ್ಯೆ ಪ್ರಮಾಣ, ಆದಾಯ, ಆರ್ಥಿಕ ಪ್ರಾಮುಖ್ಯತೆ, ಮೂಲಸೌಕರ್ಯ ಸೌಲಭ್ಯಗಳ ಅನ್ವಯ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ, 5 ನಗರ ಪಾಲಿಕೆಗಳನ್ನು ಸ್ಥಾಪಿಸಲಾಗಿದೆ. ಪಾಲಿಕೆಗಳ ಆಡಳಿತ ನಿರ್ವಹಣೆಗೆ, ಐ.ಎ.ಎಸ್, ಐ.ಪಿ.ಎಸ್.; ಕೆ.ಎ.ಎಸ್., ಕೆ.ಎಸ್.ಪಿ.ಎಸ್. ಹುದ್ದೆಗಳನ್ನು ಮರು ವಿನ್ಯಾಸಗೊಳಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಎಕ್ಸ್ ಮಾಧ್ಯಮದಲ್ಲಿ, ಪ್ರಕಟಿಸಿದ್ದಾರೆ.

<><><>

'ವೃಕ್ಷಮಾತೆ' ಎಂದೇ ಖ್ಯಾತರಾಗಿರುವ ಶತಾಯುಷಿ, ಸಾಲು ಮರದ ತಿಮ್ಮಕ್ಕನವರು, ಪರಿಸರ ಸಂರಕ್ಷಣೆಗಾಗಿ ನೀಡಿರುವ, ಅಪಾರ ಕೊಡುಗೆಯನ್ನು ಸ್ಮರಿಸಿ, ಅವರ ಹೆಸರಿನಲ್ಲಿ ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ತಾಲೂಕಿನ, ಬಿದರಕುಂದಿ ಬಳಿ, ವೃಕ್ಷೋದ್ಯಾನ ನಿರ್ಮಾಣವಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ವೃಕ್ಷೋದ್ಯಾನ, ಹಸಿರು ಪರಿಸರ ನಿರ್ಮಾಣಕ್ಕೆ ದಾರಿಯಾಗಲಿದೆ. ಮುಂದಿನ ಪೀಳಿಗೆಗಳಿಗೂ ಶಾಶ್ವತ ಪ್ರಕೃತಿ ಸಂಪತ್ತನ್ನು ನೀಡಲಿದೆ, ಎಂದಿದ್ದಾರೆ.

<><><>

ಈ ಬಾರಿ ಮುಂಗಾರು ಉತ್ತಮವಾಗಿದ್ದು, ರಾಜ್ಯದಾದ್ಯಂತ ಬಿತ್ತನೆ ಕಾರ್ಯ ಯಶಸ್ವಿಯಾಗಿ ನಡೆದಿದೆ. ಶೇಕಡ 95 ರ ಷ್ಟ ಗುರಿ ಸಾಧಿಸಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ, ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ.

ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರಿಗೆ, ಯಾವುದೇ ತೊಂದರೆಯಾಗದಂತೆ, ಕೃಷಿ ಇಲಾಖೆ ಮುಂಜಾಗ್ರತೆ ವಹಿಸಿದೆ, ಎಂದರು.

<><><>

ಕಲಬುರಗಿ ಜಿಲ್ಲೆಯಲ್ಲಿ, ಈ ಬಾರಿ, ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಬೆಳೆಹಾನಿ ಕುರಿತು, ಈ ತಿಂಗಳ 17 ರಂದು ಕಲ್ಯಾಣ ಕರ್ನಾಟಕ ಉತ್ಸವಕ್ಕೆ ಮುಖ್ಯಮಂತ್ರಿಗಳು ಆಗಮಿಸುತ್ತಿರುವ ಹಿನ್ನೆಲೆ, ಖುದ್ದು ಪರಿಶೀಲಿಸಲಿದ್ದಾರೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಬೆಂಗಳೂರಿನ ವಿಕಾಸಸೌಧದ ಸಚಿವಾಲಯದಲ್ಲಿ, ಕಲಬುರಗಿ ಜಿಲ್ಲಾ ಜನಪ್ರತಿನಿಧಿಗಳೊಂದಿಗೆ, ಸಭೆ ನಡೆಸಿ, ಅವರು ಮಾತನಾಡಿದರು. ಕಲಬುರಗಿ ಜಿಲ್ಲೆಯಲ್ಲಿ, ಜನವರಿ ಯಿಂದ ಆಗಸ್ಟ್ ತಿಂಗಳ ಅಂತ್ಯದ ವರೆಗೆ, 699 ಮಿಲ್ಲಿ ಮೀಟರ್ ಮಳೆಯಾಗಿದೆ. ವಾಡಿಕೆಗಿಂತ ಶೇಕಡ 49 ರ ಷ್ಟ ಹೆಚ್ಚು ಮಳೆಯಾಗಿದೆ. ಮುಂಬರುವ ಎರಡು ದಿನಗಳಲ್ಲಿ ಹಾನಿಯ ಸಮಗ್ರ ವರದಿ ಲಭಿಸಲಿದೆ ಎಂದು, ಪ್ರಿಯಾಂಕ ಖರ್ಗೆ ಹೇಳಿದರು.

<><><>

ಬೀದರ್ ಜಿಲ್ಲೆಗೆ, ಮಳೆ ಹಾನಿ ಪರಿಹಾರವಾಗಿ, 100 ಕೋಟಿ ರೂಪಾಯಿ, ವಿಶೇ ' ಪರಿಹಾರ ನೀಡುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಮನವಿ ಮಾಡಿದ್ದಾರೆ. ರಾಷ್ಟ್ರೀಯ ಹಾಗೂ ರಾಜ್ಯ ವಿಪತ್ತು

ನಿರ್ವಹಣಾ ನಿಧಿ ನಿಯಮಾವಳಿಗಳ ಅಡಿ, ಸಮೀಕ್ಷೆ ಕೈಗೊಳ್ಳಲಾಗಿದೆ. ಪ್ರಾಥಮಿಕ ಅಂದಾಜಿನಂತೆ, 500 ಕೋಟಿ ರೂಪಾಯಿ ನಷ್ಟ ಸಂಭವಿಸಿದೆ ಎಂದು, ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾಗಿ, ತಿಳಿಸಿದ್ದಾರೆ.

**<><><>**

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

**<><><>**

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.